# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

**ಸಿ.ಸಿ.ನಂಃ1870/2023**

ಸಿ.ಡಬ್ಲ್ಯೂ –2 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಸಂಜುಕುಮಾರ |
| ತಂದೆಃಗಂಡ | ಃ | ದೇವಿಂದ್ರಪ್ಪ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ 27.11.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮರು ಮುಖ್ಯ ವಿಚಾರಣೆ ಃ**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1, 3 ರಿಂದ 9 ರವರ ಪರಿಚಯ ಇರುವುದಿಲ್ಲ. ಮೃತ ವಿಶಾಲ ನನಗೆ ಪರಿಚಯ ಇರುವುದಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿನಾಂಕ: **01.04.2022** ರಂದು ಅಮವಾಸೆ ಇದ್ದ ಕಾರಣ ನಾನು ಹಾಗೂ ಆನಂದ ಮಹಾಪೂರತಾಯಿ ದೇವಸ್ಥಾ,ನದ ಹತ್ತಿರ ಮಾತನಾಡುತ್ತ ಕುಳಿತಿದ್ದೇವು ಎಂದರೆ ಸರಿಯಲ್ಲ.ನಾವು ಮೋಟರ ವಾಹನ ಸಂಖ್ಯೆ ಕೆಎ-**32**/ಇಎಲ್-**8719** ರಲ್ಲಿ ಮಹಾಪೂರತಾಯಿ ದರ್ಶನ ಮಾಡಿಕೊಂಡು ನಾನು ಹಾಗೂ **1** ನೇ ಆರೋಪಿ ವಾಪಸ್ಸು ಹೊರಟಪಿದ್ದೇವು ಎಂದರೆ ನನಗೆ ಗೊತ್ತಿಲ್ಲ. ನಾನು ಹಿಂದೆ ಕುಳಿತಿದ್ದು **1** ನೇ ಆರೋಪಿ ವಾಹನ ಚಲಾಯಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಮಹಾಪೂರತಾಯಿ ಕಮಾನ ಹತ್ತಿರ **1** ನೇ ಆರೋಪಿ ಜೋರಾಗಿ ಚೀರಾಡುತ್ತ ಅತಿ ವೇಗವಾಗಿ ನಿಶ್ಕಾಳಜಿತನದಿಂದ ವಾಹನ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ವಾಹನವನ್ನು ಆಕಡೆಯಿಂದ ಈ ಕಡೆ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಮತ್ತೊಂದು ಮೋಟರ ವಾಹನ ಕ್ಕೆ **1** ನೇ ಆಜರೋಪಿ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾಸಾ-**9** ರವರು ಬಂದು ಎಬ್ಬಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನನಗೆ ಮುಖಕ್ಕೆ, ಎದೆಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಮೋಟರ ವಾಹನ ಚಲಾಯಿಸುತ್ತಿದ್ದ ಮತ್ತೊಬ್ಬ ವ್ಯಕ್ತಿಯ ಹೆಸರು ವಿಶಾಲ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಅವನ ಹಿಂದೆ ಕುಳಿತವನ ಹೆಸರು ಪ್ರವೀಣ ಚಾಸಾ-**3** ರವರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇಬ್ಬರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವಿಶಾಲರವರು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಅಪಘಾತವಾದ ಆದ ಬಗ್ಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಕುರಿತು ದಿ.02.04.2022 ರಂದು ನರೋಣಾ ಪೋಲಿಸರ ಮುಂದೆ ಈ ಕೆಳಗೆ ಓದಿ ಹೇಳಿದ ಹಾಗೇ "ನಾನು

............ ನಿಜವಿರುತ್ತದೆ" ಎಂದು ಹೇಳಿಕೆ ಕೊಟ್ಟಿರುತ್ತೆನೆ ಎಂದರೆ ಸರಿ ಅಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ನಿಪಿ-1 ರ ಪ್ರಕಾರ ಹೇಳಿಕೆ ಸಲ್ಲಿಸಿದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ:**

ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆ:-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.